# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ಧಾಪುರ ವಾರ್ಡ್–144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ಪ್ರದೀಪ್‌ಕುಮಾರ್ ಎನ್., ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:22/08/2022 ರಂದು ಸೋಮವಾರದಂದು ಬೆಳಗ್ಗೆ 10.00 ರಿಂದ 11.30 ರವರೆಗೆ ವಾರ್ಡ್ ಕಮಿಟಿ ಸಭೆಯನ್ನು ಟಿ. ಮರಿಯಪ್ಪ ರಸ್ತೆಯಲ್ಲಿರುವ ವಾರ್ಡ್ ಕಛೇರಿ ಸಭಾಂಗಣದಲ್ಲಿ ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಪ್ರದೀಪ್‌ಕುಮಾರ್ ಎನ್, ಸ.ಕಾ.ನಿ.ಅ (ಕೆ.ಗೌ.ನ) ಹಾಗೂ ನೋಡಲ್ ಅಧಿಕಾರಿ.
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–144.
3. ಶ್ರೀಮತಿ. ಸುರೇಖ ಆರ್. ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–144.
4. ಕೆಲಸ ಪರಿವೀಕ್ಷಕರು, ಬೆಂ.ನೀ.ಸ. & ಒ. ಮಂಡಳಿ.
5. ಹಾಗೂ ಸಾರ್ವಜನಿಕರು.

*********

1. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿ ದೂರುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು. ಅದರಂತೆ ಕಳೆದ ಸಭೆಯ ನಡವಳಿಗಳ ದೂರುಗಳನ್ನು ಪರಿಹರಿಸಲಾಗಿರುತ್ತದೆ.



Scanned with CamScanner

2. ವಾರ್ಡಿನ ಸ್ಥಳೀಯರಾದ ಶ್ರೀ. ಮಂಜುನಾಥ್ ಟಿ. ರವರು ಮಾತನಾಡಿ ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಬಿಡಾಡಿ ಹಸುಗಳು ಹೆಚ್ಚಾಗಿದ್ದು, ಸಾರ್ವಜನಿಕರು ಮತ್ತು ವಾಹನಗಳು ಓಡಾಡಲು ತೊಂದರೆಯಾಗಿರುವುದಾಗಿ ತಿಳಿಸುತ್ತಾ, ಬೇರೆ ಪ್ರದೇಶದಿಂದ ನಾಯಿಗಳನ್ನು ತಂದು ಇಲ್ಲಿ ಬಿಡುತ್ತಿದ್ದಾರೆ ಎಂದು ಮತ್ತೊಮ್ಮೆ ದೂರಿದರು. ಇದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ಪಶು ಸಂಗೋಪನಾ ಇಲಾಖೆಯವರೊಂದಿಗೆ ದೂರವಾಣಿ ಮುಖಾಂತರ ಮಾತನಾಡಿ ಕ್ರಮ ವಹಿಸಲು ತಿಳಿಸಿದರು.

3. ವಾರ್ಡಿನ ಸ್ಥಳೀಯರಾದ ಶ್ರೀ. ಮಂಜುನಾಥ್ ಟಿ. ರವರು ಮಾತನಾಡಿ ಗಣೇಶ ಉತ್ಸವದ ಅನುಮತಿಯ ಬಗ್ಗೆ ಕೇಳಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಈ ತಹಲ್‌ವರೆಗೆ ಗಣೇಶ ಉತ್ಸವಕ್ಕೆ ಸಂಬಂಧಪಟ್ಟಂತೆ ಪಾಲಿಕೆ ವತಿಯಿಂದ ಯಾವುದೇ ಸುತ್ತೋಲೆ ಹೊರಡಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

4. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸರಿಯಾದ ಸಮಯಕ್ಕೆ ವಿದ್ಯುತ್‌ಚ್ಛಕ್ತಿ ಸರಬರಾಜು ಮತ್ತು ಸದರಿ ವಾರ್ಡಿನ ರಸ್ತೆಗಳಾದ ಸೋಮೇಶ್ವರನಗರ, ಕೆ.ಎಂ. ಕಾಲೋನಿಗಳಲ್ಲಿ ಸುಮಾರು 10 ವಿದ್ಯುತ್ ಕಂಬಗಳು ಹಾಳಾಗಿದ್ದು, ಬದಲಿಸಿಕೊಡುವಂತೆ ಸಾಕಷ್ಟು ಬಾರಿ ಕೋರಿದ್ದರೂ ಸಹ ಈ ತಹಲ್‌ವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಹಿಂದಿನ ಸಭೆಯಲ್ಲಿ ದೂರಿದ್ದರು. ಈ ಸಂಬಂಧ ನೋಡಲ್ ಅಧಿಕಾರಿಯವರು ಹಿಂದಿನ ಸಭೆಯಲ್ಲಿ ನಿರ್ದೇಶನ ನೀಡಿರುವ ಮೇರೆಗೆ ವಿದ್ಯುತ್ ಕಂಬಗಳನ್ನು ಸರಿಪಡಿಸುವ ಕೆಲಸವು ಪ್ರಗತಿಯಲ್ಲಿರುವುದಾಗಿ ವಾರ್ಡ್ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

5. ವಾರ್ಡಿನ ಸ್ಥಳೀಯರಾದ ಶ್ರೀ. ಸುಮಂತ್, ಶ್ರೀ. ಅಜ್ಮಲ್, ಶ್ರೀ. ಸುರೇಶ್, ಹಾಗೂ ಶ್ರೀ.ಅಶೋಕ್ ರವರು ಮಾತನಾಡಿ ಮುರಳಿ ಕಾಲೋನಿಯಲ್ಲಿ ನಿರ್ಮಿಸಿದ ಆರ್.ಸಿ.ಸಿ ಚರಂಡಿಯ ಕಾಮಗಾರಿಯು ಅಪೂರ್ಣವಾಗಿರುವುದರಿಂದ ಹಾಗೂ ಸದರಿ ರಸ್ತೆಯು ಹಾಳಾಗಿರುವುದರಿಂದ ಸ್ಥಳೀಯರ ವಾಹನ ಸಂಚಾರಕ್ಕೆ ತೀವ್ರ ತರಹದ ತೊಂದರೆಯಾಗಿದೆ ಎಂದು ಹಾಗೂ ಈ ಕಾಮಗಾರಿಯ ಗುತ್ತಿಗೆದಾರರಿಗೆ ಎಷ್ಟು ಬಾರಿ ಹೇಳಿದರೂ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲವೆಂದು ಮತ್ತೊಮ್ಮೆ ಸಭೆಯಲ್ಲಿ ಅಧ್ಯಕ್ಷರಿಗೆ ದೂರಿದ್ದರು. ಈ ವಿಷಯದ ಬಗ್ಗೆ ಅಧ್ಯಕ್ಷರು ಸಭೆಯಲ್ಲಿಯೇ ಗುತ್ತಿಗೆದಾರರಿಗೆ ಕರೆ ಮಾಡಿ ಮಾತನಾಡಿ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಸೂಚಿಸಿದರು. ಆದರೆ ತಹಲ್‌ವರೆಗೆ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಆದ್ದರಿಂದ ನೋಡಲ್ ಅಧಿಕರಿಯವರು ಮಾತನಾಡಿ ಮತ್ತೊಮ್ಮೆ ಗುತ್ತಿಗೆದಾರರಿಗೆ ಸೂಚನೆ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.



Scanned with CamScanner

6. ವಾರ್ಡಿನ ಸ್ಥಳೀಯರಾದ ಶ್ರೀ. ಅಲೋಕ್ ಜಿ. ರವರು ಮಾತನಾಡಿ ಪಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗದ ವಿವರಗಳನ್ನು ನೀಡಲು ಮತ್ತೊಮ್ಮೆ ಕೇಳಿದರು. ಇದರನ್ವಯ ಪಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗದ ವಿವರಗಳನ್ನು ನೀಡಲಾಗಿರುತ್ತದೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಹಾಯಕ ಕಂದಾಯ ಅಧಿಕಾರಿಯವರಿಗೆ ಪತ್ರವನ್ನು ಬರೆಯಲು ನೋಡಲ್ ಅಧಿಕಾರಿಯವರು ಸಭೆಯಲ್ಲಿ ತಿಳಿಸಿದರು.
7. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಘನತ್ಯಾಜ್ಯ ಇಲಾಖೆಯ ಮಾರ್ಷಲ್ ರವರು ಸಣ್ಣ ವ್ಯಾಪಾರದ ಅಂಗಡಿಗಳಿಗೆ ಪ್ಲಾಸ್ಟಿಕ್ ಬ್ಯಾನ್ ಮಾಡಿ ದಂಡ ವಿಧಿಸುತ್ತಿರುವುದು ಕಂಡು ಬಂದಿದ್ದು, ಇದೇ ರೀತಿ ದೊಡ್ಡ ದೊಡ್ಡ ವ್ಯಾಪಾರ ಮಳಿಗೆಗಳಿಗೂ ಸಹ ಪ್ಲಾಸ್ಟಿಕ್ ಬ್ಯಾನ್ ಮಾಡಿ ದಂಡು ವಿಧಿಸಲು ಹಿಂದಿನ ಸಭೆಯಲ್ಲಿ ಕೋರಿದರು. ಇದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ, ಕಿರಿಯ ಆರೋಗ್ಯ ಪರಿವೀಕ್ಷರಿಗೆ ಹಾಗೂ ಮಾರ್ಷಲ್‌ರವರಿಗೆ ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಮತ್ತೊಮ್ಮೆ ಸೂಚಿಸಿದರು.
8. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಡಾ|| ಬಿ.ಆರ್. ಅಂಬೇಡ್ಕರ್ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ತೆಗೆದುಕೊಳ್ಳಲು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಲು ಕೋರಿದರು. ಈ ಹಿನ್ನೆಲೆಯಲ್ಲಿ ಅಧ್ಯಕ್ಷರು ಮಾತನಾಡಿ ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.
9. ವಾರ್ಡಿನ ಸ್ಥಳೀಯರಾದ ಶ್ರೀ. ಜಯರಾಂ ಎಂ.ಜಿ. ರವರು ಮಾತನಾಡಿ ರಾಘವೇಂದ್ರ ಕಾಲೋನಿ ಒಳಭಾಗದಲ್ಲಿ BWSSB ಚೇಂಬರ್ ಹಾಳಾಗಿದ್ದು, ಸರಿಪಡಿಸಲು ಕೋರಿದರು. ಹಾಗೂ 4ನೇ ಮುಖ್ಯರಸ್ತೆ 8ನೇ ಅಡ್ಡರಸ್ತೆಯಲ್ಲಿ ಕುಡಿಯುವ ನೀರು ಕಲುಷಿತಗೊಂಡು, ಸಾರ್ವಜನಿಕರು ಬಳಸಲು ಯೋಗ್ಯವಲ್ಲದ ರೀತಿಯಲ್ಲಿ ಇರುವುದಾಗಿ ದೂರಿದರು. ಇದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ BWSSB ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

AE 22/08/22

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

22/8/22

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ ವಾರ್ಡ್ ಸಮಿತಿ/ಸಹಾಯಕ ಇಂಜಿನಿಯರ್‌ರವರ ಕಛೇರಿ, ಸಿದ್ದಾಪುರ ವಾರ್ಡ್-144, ಟಿ. ಮರಿಯಪ್ಪ ರಸ್ತೆ, ಬಯಲು ರಂಗ ಮಂದಿರದ ಹತ್ತಿರ, ವೆಂಕಟರೆಡ್ಡಿನಗರ ಬೆಂಗಳೂರು**

ದಿನಾಂಕ:17-08-2022

### -: ಸಭೆ ತಿಳುವಳಿಕೆ ಪತ್ರ :-

**ವಿಷಯ:** ದಿನಾಂಕ:22-08-2022 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

**ಉಲ್ಲೇಖ:** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಪತ್ರ ಸಂಖ್ಯೆ: ಬಿ12(5) /ಪಿಆರ್/35/2020-21, ದಿನಾಂಕ:21-09-2020.

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿದ್ದಾಪುರ ವಾರ್ಡ್ ಸಂಖ್ಯೆ: 144ರ ವಾರ್ಡ್ ಸಮಿತಿಯ ಸಭೆಯನ್ನು **ಶ್ರೀ. ಪ್ರದೀಪ್‌ಕುಮಾರ್**, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಪ್ಪಣೆ ಮೇರೆಗೆ ದಿನಾಂಕ:22-08-2022 ಸೋಮವಾರದಂದು ಬೆಳಗ್ಗೆ 10.00 ರಿಂದ 11.30 ರವರೆಗೆ ಕರೆಯಲಾಗಿದೆ ಹಾಗೂ ವಾರ್ಡ್ ಕಮಿಟಿಯ ಸಭೆಯನ್ನು **ಟಿ. ಮರಿಯಪ್ಪ ರಸ್ತೆಯಲ್ಲಿರುವ ವಾರ್ಡ್ ಸಂಖ್ಯೆ-144ರ ವಾರ್ಡ್ ಕಛೇರಿ ಸಭಾಂಗಣದಲ್ಲಿ** ನಡೆಸಲು ಏರ್ಪಡಿಸಲಾಗಿದೆ. ಆದ ಪ್ರಯುಕ್ತ ವಾರ್ಡ್ ಕಮಿಟಿ ಅದಿಕಾರಿಗಳು (ಸದಸ್ಯರು) ಹಾಗೂ ವಾರ್ಡಿನ ಸಾರ್ವಜನಿಕ ಕುಂದು ಕೊರತೆಯ ಸಂಘ ಸಂಸ್ಥೆಯ ಪದಾದಿಕಾರಿಗಳು ದಯವಿಟ್ಟು ಸಭೆಗೆ ತಪ್ಪದೆ ಹಾಜರಾಗಿ, ವಾರ್ಡ್ ಅಭಿವೃದ್ಧಿ ಹಾಗೂ ಕುಂದು ಕೊರತೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಲು ಕೋರಿದೆ.

ಸಭೆಯಲ್ಲಿ ಚರ್ಚಿಸತಕ್ಕ ವಿಷಯ: 1) ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ 2) ವಾರ್ಡಿನ ಘನತ್ಯಾಜ್ಯಗಳ ಸಂಬಂಧಿಸಿದ ವಿಷಯಗಳು 3) BWSSB, BESCOM, & POLICE ಇಲಾಖೆಯ ವಿಷಯಗಳು 4) ಪಾಲಿಕೆಯ ಅರಣ್ಯ, ವಿದ್ಯುತ್, ಬೃಹತ್ ಮಳೆನೀರು ಕಾಲುವೆ ಹಾಗೂ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು 5) ಪಾಲಿಕೆಯ ಕಂದಾಯ ಮತ್ತು ಆರೋಗ್ಯ ಇಲಾಖೆಯ ವಿಷಯಗಳು ಹಾಗೂ 6) ಸಾರ್ವಜನಿಕರ ಇತರೆ ಕುಂದು ಕೊರತೆಗಳ ಬಗ್ಗೆ ಇತ್ಯಾದಿ.

AE 17/8/2022

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ: 144

**ಪ್ರತಿಯನ್ನು:**

1. ಶ್ರೀ. **ಪ್ರದೀಪ್‌ಕುಮಾರ್ ಎನ್.**, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ ವಿಭಾಗ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. **ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ವಿದ್ಯುತ್ ಸಮಸ್ಯೆಗಳ ಬಗ್ಗೆ, ಸಾರ್ವಜನಿಕರ ದೂರು ತುಂಬಾ ಇರುವುದರಿಂದ ಚರ್ಚಿಸಲು ಸಂಬಂಧಪಟ್ಟ ವಾರ್ಡಿನ ಅಭಿಯಂತರರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.**
4. **ಕಾರ್ಯಪಾಲಕ ಅಭಿಯಂತರರು (ಬೃಹತ್ ಮಳೆನೀರು ಕಾಲುವೆ) ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಮಳೆನೀರು ಕಾಲುವೆ ಸಮಸ್ಯೆಗಳ ಬಗ್ಗೆ, ಸಾರ್ವಜನಿಕರ ದೂರು ತುಂಬಾ ಇರುವುದರಿಂದ ಚರ್ಚಿಸಲು ಸಂಬಂಧಪಟ್ಟ ವಾರ್ಡಿನ ಅಭಿಯಂತರರನ್ನು ಕಡ್ಡಾಯವಾಗಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ಕೋರಿದೆ.**
5. ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-4) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಅಧೀಕ್ಷಕರು ತೋಟಗಾರಿಕೆ ಇಲಾಖೆ (ದಕ್ಷಿಣ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊಂಬೇಗೌಡನಗರ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸ.ಕಾ.ನಿ. ಅಭಿಯಂತರರು, ಚಿಕ್ಕಪೇಟೆ ವಿಭಾಗ ಘನತ್ಯಾಜ್ಯ ನಿರ್ವಹಣೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9. ಉಪ ಆರೋಗ್ಯಾಧಿಕಾರಿ (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹ ಕಂದಾಯ ಅಧಿಕಾರಿ, ಹೊಂಬೇಗೌಡನಗರ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ, ಬಿಬಿಎಂಪಿ ರವರಿಗೆ ಸಲ್ಲಿಸಿದೆ.

Scanned with CamScanner